ಸೋಮವಾರ ಬೆಳಿಗ್ಗೆ 9 ಅಥವಾ 10 ಗಂಟೆಗೆ ಉತ್ತರ ಕೊಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು : ಆಯಿತು. ಈಗಾಗಲೇ ಮಧ್ಯಾಹ್ನದೊಳಗಾಗಿ ಅಧ್ಯಕ್ಷರು ತಿಳಿಸಿದ ಪ್ರಕಾರ ಈಗ ವಿಧೇಯಕದ ಮೇಲೆ ಚರ್ಚೆ ಪ್ರಾರಂಭ ಮಾಡೋಣ. ಮಾಧುಸ್ವಾಮಿಯವರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರು ಮೂರು ದಿವಸದಿಂದ ಇಲ್ಲ, ನಿಂತು ಹೋಗಿದೆ. ಚಾಮರಾಜನಗರ ಕ್ಷೇತ್ರದಲ್ಲಿ ಮೂರು ದಿವಸದಿಂದ ಕುಡಿಯುವ ನೀರಿಲ್ಲ. ಇದನ್ನು ನಾನು ಮಾನ್ಯ ಅಧ್ಯಕ್ಷರನ್ನು ಕೇಳಿಕೊಂಡು, ಬಹಳ ತೊಂದರೆಯಾಗಿದೆ ಎಂದು ಹೇಳಿದ್ದೇನೆ.

ಉಪಾಧ್ಯಕ್ಷರು : ಅವರು ಈಗ ಪ್ರಾರಂಭ ಮಾಡಲಿ.

ಶ್ರೀ ವಾಟಾಳ್ ನಾಗರಾಜ್ : ನಾನು ಅನೇಕಬಾರಿ ಸರ್ಕಾರಕ್ಕೆ ಹೇಳಿಯಾಯಿತು. 300 ಕೊಳವೆ ಬಾವಿಗಳು ಕೆಟ್ಟಿವೆ, ನೀರಿಲ್ಲ, ಬಹಳ ತೊಂದರೆ ಇದೆ, ವಿದ್ಯುಚ್ಛಕ್ತಿ ಇಲ್ಲ. ಇದೇನು ಸ್ವಾಮಿ, ನಾವು ಶಾಸನ ಸಭೆಯಲ್ಲಿ ಕುಳಿತಿದ್ದೇವೆ. ಈ ಪರಿಸ್ಥಿತಿ ಇರುವಾಗ ನಾವು ಕ್ಷೇತ್ರಕ್ಕೆ ಹೋಗುವ ಹಾಗೆ ಇಲ್ಲ. ತಾವು ಸ್ವಲ್ಪ ಅವಕಾಶ ಕೊಟ್ಟರೆ ಕೇಳುತ್ತೇನೆ, ಸರ್ಕಾರ ಏನು ಉತ್ತರ ಕೊಡುತ್ತದೋ ಅದನ್ನು ಹೇಳಲಿ. ಆದ್ದರಿಂದ, ದಯವಿಟ್ಟು ಅವಕಾಶ ಕೊಡಬೇಕು. ಏಕೆಂದರೆ, ಪರಿಸ್ಥಿತಿ ಬಹಳ ಹದಗೆಟ್ಟು ಹೋಗಿದೆ.

ಉಪಾಧ್ಯಕ್ಷರು : ತಮಗೆ ಅವಕಾಶ ಅನಂತರ ಕೊಡೋಣ. ಈಗ ಅವರನ್ನು ಕರೆದಿದ್ದೇನೆ, ಅವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ತೀರ್ಪನ್ನು ನಾನು ವಿರೋಧ ಮಾಡುವುದಿಲ್ಲ. ಆದರೆ, ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ, ವಿದ್ಯುಚ್ಛಕ್ತಿ ಇಲ್ಲ.

ಉಪಾಧ್ಯಕ್ಷರು : ಉತ್ತರ ಹೇಳಬೇಕಾದರೆ, ಇಲ್ಲಿ ಆರ್. ಡಿ.ಪಿ.ಆರ್.ಮಂತ್ರಿಗಳು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಕ್ಷೇತ್ರ ಒಂದೇ ಅಲ್ಲ. ಇಡೀ ರಾಜ್ಯದ ಪರಿಸ್ಥಿತಿ ಇದೇ ಆಗಿರುತ್ತದೆ. ಕುಡಿಯುವ ನೀರಿನ ವ್ಯವಸ್ಥೆ ಸರಿಪಡಿಸುವುದಕ್ಕೆ ಇವರ ಕೈಲಿ ಆಗಲಿಲ್ಲ. ನಾನು ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾವು ಸುಮ್ಮನೆ ಇಲ್ಲಿ ಶಾಸನ ಸಭೆಯಲ್ಲಿ ಕುಳಿತಿದ್ದೇವೆ. ಮೂರು ದಿವಸಕ್ಕೊಂದು ಸಾರಿ ನೀರು ಕುಡಿಯುವುದು ಎಂದರೆ, ಇದೇನು ಪರಿಸ್ಥಿತಿ. ಇದನ್ನು ಸರ್ಕಾರಕ್ಕೆ ಎಷ್ಟು ಸಾರಿ ಹೇಳಿದ್ದೇವೆ. ನಾವು ಅನೇಕಬಾರಿ ಸರ್ಕಾರಕ್ಕೆ ಹೇಳಿದ್ದೇವೆ.

ಉಪಾಧ್ಯಕ್ಷರು : ಈ ರೀತಿ ನೀವೊಬ್ಬರೇ ಮಾತನಾಡಿದರೆ ಹೇಗೆ? ನೀವು ಪ್ರಶ್ನೆ ಕೇಳಿದರೆ, ಅದಕ್ಕೆ ಇಲ್ಲಿ ಉತ್ತರ ಹೇಳುವವರೂ ಬೇಕು. ಆರ್.ಡಿ.ಪಿ.ಆರ್.ಮಂತ್ರಿಗಳು ಇಲ್ಲ. ಈಗ ಚರ್ಚೆಯನ್ನು ಪ್ರಾರಂಭ ಮಾಡೋಣ. ಅವರು ಬಂದಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಆರ್.ಡಿ.ಪಿ.ಆರ್. ಮಂತ್ರಿಗಳು ಸದನದಲ್ಲಿ ಬಂದರೆ, ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅವರು ಬರುವವರೆಗೆ ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಅಧ್ಯಕ್ಷರ ಪೀಠದ ಮುಂಭಾಗದಲ್ಲಿ ಧರಣಿ ಕುಳಿತರು)

ಉಪಾಧ್ಯಕ್ಷರು : ನೀವು ಹಿರಿಯ ಸದಸ್ಯರು, ಈ ರೀತಿ ಮಾಡಿದರೆ ಹೇಗೆ? ನಾನೇನು ಹೇಳಿದ್ದೇನೆ, ದಯಮಾಡಿ ತಾವು ಅರ್ಥಮಾಡಿಕೊಳ್ಳಿ. ಅವರು ಈಗ ಪ್ರಾರಂಭ ಮಾಡಲಿ, ಆರ್.ಡಿ.ಪಿ.ಆರ್ ಮಿನಿಸ್ಟರು ಬಂದರೆ ತಮಗೆ ಅವಕಾಶ ಮಾಡಿಕೊಡುತ್ತೇನೆ, ಆಗ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಹಿರಿಯ ಸದಸ್ಯರ ಗತಿಯೇ ಹೀಗಾದರೆ, ಮಿಕ್ಕವರ ಗತಿ ಏನು?

ಉಪಾಧ್ಯಕ್ಷರು : ನಮಗೆ ಎಲ್ಲರೂ ಒಂದೇ. ಆಮೇಲೆ ತೆಗೆದುಕೊಳ್ಳೋಣ. ಈಗ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಕುಡಿಯುವ ನೀರಿನ ತೊಂದರೆ ಬಗ್ಗೆ ನಿಜವಾಗಿಯೂ ಮೂರನೇ ಸಲ ಪ್ರಸ್ತಾಪ ಮಾಡುತ್ತಿದ್ದಾರೆ. ಅವರು ಹಿರಿಯ ಸದಸ್ಯರು. ಆಮೇಲೆ ಪದೇ ಪದೇ ಪ್ರಸ್ತಾಪ ಮಾಡಿ, ಯಾರು ಸರ್ಕಾರದ ಮೇಲೆ ಬಹಳ ಪರಿಣಾಮ ಬೀರತಕ್ಕ ವ್ಯಕ್ತಿ ಇದ್ದಾರೆ, ಮುಖಂಡರು ಇದ್ದಾರೆ ಅವರ ಗತಿಯೇ ಹೀಗಾದರೆ ಬೇರೆ ಶಾಸಕರ ಗತಿ ಏನು ಎನ್ನತಕ್ಕ ಪರಿಸ್ಥಿತಿ ಬಂದಿದೆ. ಅವರು ಪರಿಣಾಮಕಾರಿಯಾಗಿ ಮಾತನಾಡುತ್ತಾರೆ ಮತ್ತು ಅಲ್ಲಿರತಕ್ಕ ಕುಂದುಕೊರತೆ ಬಗ್ಗೆ ಹೇಳುತ್ತಾರೆ. ಅನೇಕಸಾರಿ ಆಶ್ವಾಸನೆ ಕೊಟ್ಟಿದ್ದಾರೆ. ಇಲ್ಲಿ ಪ್ರಕಾಶ್‌ರವರೂ ಕೂಡ ಹೇಳಿದರು. ಈ ಸಾರಿ ಮಾಡುತ್ತೇನೆ, ತಾವು ಎದ್ದೇಳಿ ಎಂದು ಕೈಜೋಡಿಸಿ ಕೇಳಿಕೊಂಡರು. ಆಗ, ಅವರು ಧರಣಿ ಮುಕ್ತಾಯ ಮಾಡಿ ಬಂದರು. ಪುನಃ ಈಗ ಅದೇ ಪರಿಸ್ಥಿತಿ ಬಂದರೆ ಹೇಗೆ.

ಉಪಾಧ್ಯಕ್ಷರು : ಆರ್.ಡಿ.ಪಿ.ಆರ್. ಮಂತ್ರಿಗಳು ಬರಲಿ, ಅವರಿಗೆ ಅವಕಾಶ ಕೊಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಫ್ಲೋರ್ ಲೀಡರ್ ಇರುವುದರಿಂದ, ಅನೇಕಸಾರಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಸಿಗುತ್ತದೆ. ಎಷ್ಟೋ ಜನ ಶಾಸಕರಿಗೆ ಪ್ರಸ್ತಾಪ ಮಾಡುವುದಕ್ಕೂ ಅವಕಾಶ ಸಿಗುವುದಿಲ್ಲ. ಅದಕ್ಕಾಗಿ, ಕೊನೆಪಕ್ಷ ಇದರ ಬಗ್ಗೆ ಅವರು ಏನಾದರೂ ಯೋಚನೆ ಮಾಡಬೇಕಲ್ಲ.

ಉಪಾಧ್ಯಕ್ಷರು : ಆರ್.ಡಿ.ಪಿ.ಆರ್ ಮಂತ್ರಿಗಳು 9-5-98ರಂದು ರಾಯಚೂರು ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿರುವ ಕಾರಣದಿಂದ, ಅಧಿವೇಶನದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ ಮತ್ತು ನನ್ನ ಗೈರು ಹಾಜರಿಗಾಗಿ ದಯವಿಟ್ಟು ಅನುಮತಿ ಕೊಡಬೇಕೆಂದು ತಮ್ಮನ್ನು ಕೋರುತ್ತೇನೆಂದು ಪತ್ರ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಅನುಮತಿಯ ಪತ್ರವನ್ನು ಸದನದಲ್ಲಿ ಹಾಕಿ, ಸದನ ಅನುಮತಿ ಕೊಡುವುದಿಲ್ಲ. ಅವರು ಸದನದ ಒಪೀನಿಯನ್ ಪಡೆಯಬೇಕು.

ಉಪಾಧ್ಯಕ್ಷರು : ಅವರು ಹೋಗುವುದಕ್ಕೆ ಈಗಾಗಲೇ ಅಧ್ಯಕ್ಷರು ಪರವಾನೆ ಕೊಟ್ಟಿದ್ದಾರೆ. ತಾವು ದಯಮಾಡಿ ಸಹಕಾರ ಮಾಡಿ.